

ಈಗ ಅಷ್ಟಿಷ್ಟು ನೀರ ಉಳಿಸಿಕೊಂಡು ಉಸಿರಾಡುತ್ತಿತ್ತು.

ನಾನು ಬಹಳ ದಿನದಿಂದ ಕಾಯುತ್ತಿದ್ದ ಕಾಮನ್ ಕಿಂಗ್‌ಫಿಶರ್ ಪುರ್ರೆಂದು ಸನಿಹದಲ್ಲೇ ಹಾರಿ ಹೋಗಿದ್ದು ಉತ್ಸಾಹ ಕೆರಳಿಸಿತು. ಜತೆಗೆ ಅದರ ಬಾಯಲ್ಲಿ ಮೀನು ಕೂಡ ಇದ್ದದ್ದು ಹೊಸ ಆಸೆ ಹುಟ್ಟಿಸಿತು. ಓಹೋ! ಬಾಯಲ್ಲಿ ಮೀನಿದೆ ಎಂದರೆ ಕೆಸರ ದಡದಲ್ಲಿ ಎಲ್ಲೋ ಅದು ಗೂಡು ಕಟ್ಟಿದೆ ಎಂದು ತಿಳಿಯಲು ಹೆಚ್ಚು ಸಮಯ ಹಿಡಿಯಲಿಲ್ಲ.

ಈ ಮಿಂಚುಳ್ಳಿಗಳ ಮನೆ ಎಲ್ಲಿದೆ ಎಂಬುದು ಫಕ್ಕನೆ ತಿಳಿಯುವುದಿಲ್ಲ. ಇದಕ್ಕೆ ಮೊದಲ ಕಾರಣ ಇದರ ಓಡುವ ವೇಗ. ನೋಡುನೋಡುತ್ತಲೇ ಮಿಂಚಿನಂತೆ ಎಲ್ಲಿಂದ ಎಲ್ಲಿಗೋ ಹಾರಿ ಮಾಯವಾಗಿ ಬಿಡುತ್ತದೆ. ಎಷ್ಟೇ ಜಾಗರೂಕತೆಯಿಂದ ನೋಡಿದರೂ ಎಲ್ಲಿಗೆ ಹೋಯಿತೆಂಬುದೇ ತಿಳಿಯುವುದಿಲ್ಲ. ನಮ್ಮ ಕಣ್ಣು ನೋಡಿ ಬುದ್ಧಿಶಕ್ತಿ ಗ್ರಹಿಸುವುದರೊಳಗೆ ಕಣ್ಮರೆಯಾಗಿ ಬಿಟ್ಟಿರುತ್ತವೆ. ಸಾಮಾನ್ಯವಾಗಿ ಹಕ್ಕಿಗಳು ತಮ್ಮ ಗೂಡುಗಳನ್ನು ಮರೆಮಾಚಿ ಇಡುವ ವಿಷಯದಲ್ಲಿ ತುಂಬಾ ಚಾಲಾಕು. ತಮ್ಮ ಮನೆಗಳ ಇರುವಿಕೆ ಶತ್ರುಗಳ ಕಣ್ಣಿಗೆ ಕಂಡು ಬಿಡುವುದೋ ಎಂದು ವಿಪರೀತ ಎಚ್ಚರಿಕೆ ವಹಿಸುತ್ತವೆ. ಕೆಲವೊಮ್ಮೆ ಅವುಗಳ ನಿವಾಸ ಬೇಗ ಸಿಕ್ಕರೂ ಅವಸರ ಮಾಡುವಂತಿಲ್ಲ. ಎರಡು ದಿನ ಅಲ್ಲೇ ಮರೆಯಲ್ಲಿ ಕೂತಿದ್ದು ಕಾದು ಅದರ ಚಟುವಟಿಕೆಗಳನ್ನು ಗಮನಿಸಬೇಕು. ನಮ್ಮ ಸಾಮಿಪ್ಯದಿಂದ ಅವುಗಳಿಗೆ ಯಾವ ಗಂಡಾಂತರವೂ ಇಲ್ಲ ಎಂಬ ಸ್ಪಷ್ಟ ಭರವಸೆ ಮೂಡಿಸಬೇಕಾಗಿದ್ದು ನಮ್ಮ ಕರ್ತವ್ಯ. ಮೇಲಾಗಿ ಬಹಳಷ್ಟು ಪಕ್ಷಿಗಳು ಯಾವತ್ತೂ ನೇರವಾಗಿ ತಮ್ಮ ಗೂಡುಗಳನ್ನು ಪ್ರವೇಶಿಸುವುದಿಲ್ಲ. ಪುಕ್ಕಲರಂತೆ ನಟಿಸುತ್ತಾ ಬೇಕಂತಲೇ ಅಲ್ಲಿ ಇಲ್ಲಿ ಕೂತು ಟೈಂಪಾಸ್ ಮಾಡುತ್ತವೆ. ಹೀಗೆ ಅವು ವರ್ತಿಸುವುದು ಶತ್ರುವಿನ ಗಮನವನ್ನು ಹಾಳುಮಾಡುವ ಒಂದು ತಂತ್ರವಷ್ಟೇನೆ. ತಮ್ಮ ಮರಿಗಳ ತಾಣ ಯಾರಿಗೂ ಕಾಣದಂತೆ ಅವು ಎಷ್ಟೇ ಜಾಗ್ರತೆ ವಹಿಸಿದರೂ ಮಹಾ ಕಳ್ಳರಾದ ನಾವು